
## 15 ನಿಮಿಷದಲ್ಲಿ ಎಬೋಲಾ ಪರೀಕ್ಷೆ



ಕೇವಲ ಹದಿನೈದು ನಿಮಿಷಗಳಲ್ಲಿ 'ಎಬೋಲಾ' ಪರೀಕ್ಷೆಯ ಫಲಿತಾಂಶವನ್ನು ಪಡೆಯಲು ಅನುಕೂಲವಾಗುವ ತಂತ್ರಜ್ಞಾನವನ್ನು ಲಂಡನ್ನಿನ ಸಂಶೋಧಕರು ಕಂಡುಹಿಡಿದಿದ್ದಾರೆ.

ಸೋಲಾರ್ ಶಕ್ತಿಯಿಂದ ಕಾರ್ಯನಿರ್ವಹಿಸುವ ಈ ಚಿಕ್ಕ ಯಂತ್ರವನ್ನು ಸೂಟ್‌ಕೇಸ್ ಪರೀಕ್ಷಾಲಯ ಎಂದು ಸಂಶೋಧಕರು ಪ್ರಶಂಸಿಸಿದ್ದಾರೆ. ಈ ಯಂತ್ರ ಗಾತ್ರದಲ್ಲಿ ಚಿಕ್ಕ ಸೂಟ್‌ಕೇಸಿನಲ್ಲಿ ಸಾಗಿಸುವಷ್ಟು ಪುಟ್ಟದಾಗಿರುತ್ತದೆ. ಸೋಂಕಿನ ಶಂಕೆ ಇದ್ದರೆ ಆ ಕೂಡಲೇ ಫಲಿತಾಂಶವನ್ನು ಇದ್ದ ಸ್ಥಳದಲ್ಲಿಯೇ ಪಡೆಯಬಹುದು ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಮಾರಣಾಂತಿಕ ಈ ರೋಗ ಇತ್ತೀಚಿನ ದಿನಗಳಲ್ಲಿ ಮನುಷ್ಯ ಕುಲವನ್ನೇ ನಡುಗಿಸಿತ್ತು. ಹೊಸ ಯಂತ್ರದ ಸಹಾಯದಿಂದ ರೋಗಿಯನ್ನು ಸುಲಭವಾಗಿ ಗುರುತಿಸಬಹುದು. ಜೊತೆಗೆ ಸೋಂಕು ಹರಡುವುದನ್ನು ತಡೆಯುವ ನಿಟ್ಟಿನಲ್ಲಿಯೂ ಇದು ಸಹಾಯವಾಗುತ್ತದೆ.

## ಹೆಚ್ಚುತ್ತಿರುವ ಫೇಸ್‌ಬುಕ್ ಹುಚ್ಚು

ಹದಿಹರೆಯದ ಮಕ್ಕಳು ತಮ್ಮ ಹೆಚ್ಚಿನ ಸಮಯವನ್ನು ಫೇಸ್‌ಬುಕ್ ಹಾಗೂ ಇತರ ಸಾಮಾಜಿಕ ಜಾಲ ತಾಣಗಳಲ್ಲಿ ಕಳೆಯುತ್ತಿದ್ದಾರೆ. 32 ದೇಶಗಳ 1,70,000 ಅಂತರ್ಜಾಲ ಬಳಕೆದಾರರ ಸಮೀಕ್ಷೆಯಿಂದ ಇದು ದೃಢಪಟ್ಟಿದೆ ಎಂದು ಸಂಶೋಧಕರು ಹೇಳಿದ್ದಾರೆ.

16 ರಿಂದ 19 ವರ್ಷದೊಳಗಿನ ಪ್ರತಿಶತ 66ರಷ್ಟು ಪ್ರಮಾಣದ ಮಕ್ಕಳು ನಿರಂತರವಾಗಿ ಫೇಸ್‌ಬುಕ್ ನೋಡುತ್ತಾರೆ. ಕಳೆದ ಎರಡು ವರ್ಷದ ಅವಧಿಯಲ್ಲಿ ಶೇ.20ರಷ್ಟು ಪ್ರಮಾಣದಲ್ಲಿ ಹದಿಹರೆಯದವರ ಈ ಚಾಲಾಟ ಹೆಚ್ಚಾಗಿದೆ. ಇದರಲ್ಲಿಯೇ ಫೋಟೊ ಹಾಗೂ ಸಂದೇಶಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಮೀರಿಸುವಂತೆ ವಾಟ್ಸ್‌ಆ್ಯಪ್ ಬಳಕೆ ಈ ವಯೋಮಾನದವರಲ್ಲಿ ಹೆಚ್ಚಾಗುತ್ತಿದೆ ಎನ್ನುವುದನ್ನು ಜಾಗತಿಕ ಅಧ್ಯಯನ ದೃಢಪಡಿಸಿದೆ.

## ಬಹೂಪಯೋಗಿ ಸೀಬೆ

ಪೇರಳೆ ಅಥವಾ ಸೀಬೆ ಬಹೂಪಯೋಗಿ ಆರೋಗ್ಯ ವರ್ಧಕ ಎಂದು ಜಪಾನಿನ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ದೇಹದಲ್ಲಿ ಇನ್ಸುಲಿನ್ ವೃದ್ಧಿಸಲು ಇದು ನೆರವಾಗುವುದರಿಂದ ಮಧುಮೇಹ ನಿಯಂತ್ರಣಕ್ಕೂ ಸಹಾಯ ಮಾಡುತ್ತದೆ.

ಸೀಬೆಯಲ್ಲಿ ಜೀರ್ಣಕ್ರಿಯೆಗೆ ನೆರವಾಗುವ ಹಲವು ಪೋಷಕಾಂಶಗಳಿವೆ. ಮಕ್ಕಳಲ್ಲಿ ಕಾಣಿಸಿಕೊಳ್ಳುವ ಅತಿಸಾರ ಭೇದಿಗೆ ಸೀಬೆ ಎಲೆಗಳನ್ನು ಬೇಯಿಸಿ ಬಸಿದ ನೀರನ್ನು ಔಷಧವಾಗಿಯೂ ಬಳಸಬಹುದು. ಇದರಿಂದ ಶ್ವಾಸನಾಳ ಕೂಡ ಸ್ವಚ್ಛಗೊಳ್ಳುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ವೈರಸ್ ನಿರೋಧ ಶಕ್ತಿಯೂ ಸೀಬೆಗೆ ಇರುವುದರಿಂದ ಇದರಿಂದ ನಂಜುಕಾರುವ ಗಾಯಗಳು ಬೇಗ ಗುಣವಾಗುವ ಸಾಧ್ಯತೆಯಿದೆ. ಇದು ಸೌಂದರ್ಯ ವೃದ್ಧಿಗೂ ಸಹಾಯ ಮಾಡುತ್ತದೆ ಎಂದು ತಜ್ಞರು ಹೇಳಿದ್ದಾರೆ.

–ಟಿಪ್ಸ್

## ನಕ್ಕುಬಿಡಿ

ಮಾರಾಟಗಾರ: ಈ ಪುಸ್ತಕದಿಂದ ನಿಮ್ಮ ಯಾವುದೇ ಸಮಸ್ಯೆಗೆ ಅರ್ಧದಷ್ಟು ಪರಿಹಾರ ಸಿಗುತ್ತೆ!

ವ್ಯಕ್ತಿ: ಹೌದಾ, ಹಾಗಾದರೆ ಎರಡು ಪುಸ್ತಕ ಕೊಡಿ!

★★★



ಕೇಶವ: ರವಿ, ಎರಡು ತಿಂಗಳಲ್ಲೇ ಕಾದಂಬರಿ ಬರೆದೆಯಲ್ಲ, ಹೇಗೆ ಸಾಧ್ಯವಾಯಿತು?

ರವಿ: ನನ್ನ ಹೆಂಡತಿ ಎರಡು ತಿಂಗಳು ಮುನಿಸಿಕೊಂಡು ತವರಿಗೆ ಹೋಗಿದ್ದಳು!

★★★

ಶಿಕ್ಷಕ: ಮನುಷ್ಯ ಮತ್ತು ಕತ್ತೆಗೆ ವ್ಯತ್ಯಾಸವೇನು ಗೊತ್ತಾ?

ವಿದ್ಯಾರ್ಥಿ: ಗೊತ್ತು ಸಾರ್, ಮನುಷ್ಯನನ್ನು ಕತ್ತೆ ಎನ್ನಬಹುದು, ಕತ್ತೆಯನ್ನು ಮನುಷ್ಯ ಎನ್ನುವುದಕ್ಕಾಗುವುದಿಲ್ಲ!

(ಸಂಗ್ರಹ) **ಶಂಕರೇಗೌಡ ತುಂಬಕೆರೆ, ಮಂಡ್ಯ**

ತಂದೆ: 'ಯಾಕಮ್ಮಾ ಮಗಳೇ ನನ್ನನ್ನು ಅಪ್ಪಾ ಅಂತ ಕರೀತಾ ಇದ್ದೋಳು ಈಗ ಡ್ಯಾಡೀ ಅಂತ ಕರೀತಾ ಇದೀಯಾ?'

ಮಗಳು: 'ಅಪ್ಪಾಂತ ಕರೆದರೆ ನನ್ನ ಲಿಪ್‌ಸ್ಟಿಕ್ ಹಾಳಾಗುತ್ತದೆ. ಅದಕ್ಕೆ.'



★★★

ನಾಣಿ: 'ಮೆದುಳು ಇಲ್ಲದಿದ್ದರೆ ಮನುಷ್ಯ ಬದುಕುವುದು ಸಾಧ್ಯವೇ ಇಲ್ಲವಂತೆ ಹೌದಾ?'

ಗುಂಡ: 'ನನಗೆ ನಂಬಿಕೆ ಇಲ್ಲಪ್ಪ! ಈಗ ನೀನು ಬದುಕಿಲ್ಲವೇ?'

★★★

ನಾಣಿ: 'ಅಲ್ಲಾ, ನೀರಿನಲ್ಲಿ ಬಿದ್ದ ಆ ಡಾಕ್ಟರನ್ನು ಮೊಸಳೆ ಯಾಕೆ ನುಂಗಲಿಲ್ಲ?'

ಗುಂಡ: 'ಒಂದೇ ಕಸುಬಿನವರಲ್ಲವೇ?'

(ಸಂಗ್ರಹ) **ಎಂ.ಕೆ.ಮಂಜುನಾಥ್, ಬೆಂಗಳೂರು**

---

ಗುಂಡ: ರೀ ಒಂದು ನೂರು ರೂಪಾಯಿಗೆ ಚಿಲ್ಲರೆ ಕೊಡ್ರಿ.

ವರ್ತಕ: ಚಿಲ್ಲರೆ ಇಲ್ಲಪ್ಪ.

ಗುಂಡ: ಮತ್ತೆ ಚಿಲ್ಲರೆ ಮಾರಾಟಗಾರರು ಅಂತ ಬೋರ್ಡ್ ಹಾಕಿಕೊಂಡಿದ್ದೀರಲ್ರೀ!

★★★

ಅಪ್ಪ: ಡಾಕ್ಟ್ರೆ ಪ್ರಾಥಮಿಕ ಶಾಲೆಗೆ ಹೋಗುವ ನನ್ನ ಮಗ ರಾತ್ರಿ ಇಡೀ ನಿದ್ದೆಯೇ ಮಾಡುವುದಿಲ್ಲ.

ಡಾಕ್ಟರ್: ಆತನಿಗೆ ಯಾವ ಮೆಡಿಸಿನ್ ಬೇಡ. ರಾತ್ರಿ ಊಟವಾದದ್ದೇ ಓದಲು ಕೈಯಲ್ಲಿ ಪುಸ್ತಕ ಕೊಡಿ, ಆಗ ನೋಡಿ ನಿದ್ದೆ ತಾನಾಗೇ ಬರುತ್ತೆ.

(ಸಂಗ್ರಹ) **ಜಗದೀಶ ಎಂ. ಸಂಗಣ್ಣವರ, ಬೆಳಗಾವಿ**